## ಹಿರಿಯರ ನೋವಿಗೆ ಇಂಬು

ಸಿರಿ ಕನ್ನಡದ 'ಯುಗಾಂತರ'ದಲ್ಲಿ ಸಾದಾ ಸೀದಾ, ಪ್ರಾಮಾಣಿಕ, ನಿಷ್ಠುರವಾದಿ ಸದಾಶಿವರಾಯರ ಅಳಲು ಹೇಳತೀರದು. ಸಂಬಂಧಗಳಲ್ಲಿ ಅಂಟಿಕೊಳ್ಳಲಾಗದ, ಬಿಡಲಾಗದ ಡೋಲಾಯಮಾನ ಪರಿಸ್ಥಿತಿ. ತನ್ನ ಅಸ್ತಿತ್ವಕ್ಕೆ ಪರದಾಡುವ ಸ್ಥಿತಿಯಲ್ಲಿದ್ದಾಗ ಸೊಸೆ–ಮೊಮ್ಮಗ ಬಂದಿದ್ದಾರೆ. ಮಮತಾಮಯಿಯಾದ ಅವರನ್ನು ಅಪ್ಪಿ ಒಪ್ಪಿಕೊಂಡಿದ್ದಾರೆ. ಮಗನನ್ನು ನೆನೆದು ಪಶ್ಚಾತ್ತಾಪದ ಬೇಗುದಿಯಲ್ಲಿ ಬೇಯುತ್ತಾರೆ. ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಒಟ್ಟಿನಲ್ಲಿ ಹಿರಿಯ ನಾಗರಿಕರ ತುಮುಲವನ್ನು ಬಿಂಬಿಸುವಲ್ಲಿ ಸನ್ನಿವೇಶಗಳು ಪೂರಕವಾಗಿವೆ. ಕಠೋರ ಸತ್ಯಗಳ ಕನ್ನಡಿ ಆಗಿವೆ.

–ಕೆ.ಎನ್. ಶ್ವೇತ, ತುಮಕೂರು



## 'ಶ್ರೀರಸ್ತು ಶುಭಮಸ್ತು'ನಲ್ಲಿ ಪುಳಿಯೋಗರೆ ಘಮ

ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು' ಪ್ರಾರಂಭಿಕ ಸಂಚಿಕೆಗಳು ಚೆನ್ನಾಗಿವೆ. ಕಿರುತೆರೆಯಲ್ಲಿ ಸುಧಾರಾಣಿ ಕಾಣಿಸಿಕೊಳ್ಳುತ್ತಿರುವುದು ವಿಶೇಷ. ನಾಯಕ ನಾಯಕಿಯರ ತುಂಟಾಟ ನಡುವೆ ತಾತನ ಗತ್ತು ಗಮ್ಮತ್ತು ವಿಭಿನ್ನ ಧಾಟಿಯಲ್ಲಿ ನೋಡಲು ಚೆಂದ. ಮತ್ತೊಂದು ಪ್ರಮುಖ ಆಕರ್ಷಣೆ, ನಾಯಕಿಯ ತಂದೆ ಪಾತ್ರ ಮಾಡುತ್ತಿರುವ ರಿಚರ್ಡ್ ಲೂಯಿಸ್ ಅವರ ಸಹಜ ಅಭಿನಯ. ಈ ಧಾರಾವಾಹಿಯ ಎಲ್ಲಾ ಪಾತ್ರಗಳ ಪೋಷಣೆಗೆ ಭೇಷ್ ಹೇಳಲೇಬೇಕು. ಒಂದು ಸಾಧಾರಣ ಪುಳಿಯೋಗರೆ ಗೊಜ್ಜು ಮಾಡುವ ಗುಟ್ಟನ್ನು ಕದಿಯುವ ಖಳನಾಯಕಿಯ ತಂತ್ರಗಳು ಹಾಸ್ಯಾಸ್ಪದ. ಈಗಾಗಲೇ ಇಲ್ಲೂ ಇಬ್ಬರು ಖಳ ನಾಯಕಿಯರ ಪ್ರವೇಶ ಆಗಿರುವುದರಿಂದ ಮಾಮೂಲಿ ಮಸಾಲೆಯ ಸಿದ್ಧ ಸೂತ್ರಗಳನ್ನು ಬಿಟ್ಟು ಅಪ್ಪಟ ಪುಳಿಯೋಗರೆಯ ಘಮ ಉಳಿಸಿಕೊಳ್ಳುತ್ತಾ ಒಂದು ವಿಭಿನ್ನ ಧಾರಾವಾಹಿಯಾಗಿ ಬರಲಿ.

–ಆರ್. ವೀರೇಶ್ ಕುಮಾರ್, ಬೆಂಗಳೂರು

ವಾರದ ಪತ್ರ

## ಪರ್ಯಾಯ ಗಾದೆ

'ವೇದ ಸುಳ್ಳಾದರೂ ಗಾದೆ ಸುಳ್ಳಾಗಲ್ಲ' ಎಂಬ ನಾಣ್ಣುಡಿ ಇದೆ. ಗಾದೆ ಬದಲಾಗಬಾರದು ಎಂದೇನೂ ಇಲ್ಲವಲ್ಲ. ಇತ್ತೀಚೆಗೆ ಝೀ ಕನ್ನಡದ 'ಸತ್ಯ'ದಲ್ಲಿ ಪರ್ಯಾಯ ಗಾದೆಯೊಂದು ಗಮನಸೆಳೆಯಿತು.

ಸತ್ಯನ ದೊಡ್ಡಪ್ಪ ಜನಾರ್ದನ ತನ್ನ ಹೆಂಡತಿಯ ಬುದ್ಧಿಮತ್ತೆ ಹೀಗಳೆಯಲು – 'ಕತ್ತೆಯನ್ನು ತಂದು ಸಿಂಹಾಸನದ ಮೇಲೆ ಕೂರಿಸಿದರೂ ಒದೆಯೋದನ್ನ ಬಿಡಲಿಲ್ವಂತೆ' ಎಂಬ ಗಾದೆಯನ್ನು ಪ್ರಯೋಗಿಸುತ್ತಾನೆ. 'ನಾಯೀನ ತಗೊಂಡು ಹೋಗಿ ಸಿಂಹಾಸನದ ಮೇಲೆ ಕೂರಿಸಿದರೆ 'ಹೊಲಸು' ಕಂಡು ಇಳಿಬಿತ್ತು' ಎಂಬ ಮೂಲ ಗಾದೆಯ ರೂಪವಿದು. ಕತ್ತೆಗೆ ಬುದ್ಧಿ ಕಡಿಮೆ ಎಂಬ ಅರ್ಥದಲ್ಲಿ ಈ ಗಾದೆಯನ್ನು ಬಳಸಲಾಗಿದೆ ಅಂದುಕೊಂಡರೂ ಕತ್ತೆಯನ್ನು ನಾಯಿಗೆ ಹೋಲಿಸಿರುವುದು ಸರಿಯಲ್ಲ. ಒದೆಯುವ ಸಂದರ್ಭದಲ್ಲಿ ಕತ್ತೆ ತನ್ನ ಬುದ್ಧಿಯನ್ನು ಸರಿಯಾಗಿಯೇ ಬಳಸಿರುತ್ತದೆ. ಮನ ಬಂದಂತೆ ಗಾದೆಗಳನ್ನು ತಿರುಚುವವರಿಗೆ ಇದು ಅರ್ಥವಾಗಬೇಕಷ್ಟೆ.

–ವಾ. ಮುರಳೀಧರ, ತೀರ್ಥಹಳ್ಳಿ

## ಹಳೆ ಹಾಡಿಗೆ ಬೇಕಿದೆ ಹೊಸ ಗಾಯಕರ ಸ್ಪರ್ಶ

ಚಂದನದ 'ಮರೆಯದ ಮಾಣಿಕ್ಯ' (ಅನಂತನಾಗ್ ಹಾಗೂ ಶಂಕರನಾಗ್ ಅವರ ಬಗ್ಗೆ) ಕಾರ್ಯಕ್ರಮದಲ್ಲಿ ಹಳೆಯ ಸಂಗೀತ ಗಾಯಕರು ಹಾಡಿರುವುದನ್ನೇ ಮರು ಪ್ರಸಾರ ಮಾಡುತ್ತಿರುವುದು ವಿಷಾದಕರ. ಸಾಕಷ್ಟು ಹೊಸ ಕಲಾವಿದರು ನಮ್ಮ ನಡುವೆ ಇದ್ದಾರೆ. ಅವರಿಗೆ ಅವಕಾಶ ಮಾಡಿಕೊಟ್ಟರೆ ವೀಕ್ಷಕರಿಗೂ ಚಂದ ಅನಿಸುತ್ತದೆ. ಇದು ಒಳ್ಳೆಯ ಕಾರ್ಯಕ್ರಮ. ಹೊಸ ಗಾಯಕರಿಂದ ಹಳೆ ಗೀತೆಗಳನ್ನು ಹಾಡಿಸಿ ಕಾರ್ಯಕ್ರಮಕ್ಕೆ ಮೆರುಗು ತುಂಬುವ ಕೆಲಸ ಮಾಡಿ.

–ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ

## ಪ್ರತಿಭಾವಂತ ಕಲಾವಿದ ರಾಜಣ್ಣ

ಕಲರ್ಸ್ ಕನ್ನಡದ 'ಬಿಗ್ ಬಾಸ್' ಇನ್ನೇನು ಮುಗಿಯುವ ಹಂತದಲ್ಲಿದ್ದಾಗ ಸ್ಪರ್ಧಿ ರೂಪೇಶ್ ರಾಜಣ್ಣ ಅವರಿಂದ ಕಿಚ್ಚ ಸುದೀಪ್ ಎರಡು ಹಾಡುಗಳನ್ನು ಹೇಳಿಸಿದರು. ಅದನ್ನು ಅವರು ಅದ್ಭುತವಾಗಿ ಹಾಡಿದರು. ಗಾಯನ ಅಷ್ಟೇ ಅಲ್ಲ, ಅವರೊಬ್ಬ ಅದ್ಭುತ ಮಿಮಿಕ್ರಿ ಕಲಾವಿದರೂ ಹೌದು. ಅವರು ಆ ಮನೆಯೊಳಗಡೆ ಹಲವು ಚಿತ್ರನಟರ ಅನುಕರಣೆಯನ್ನು ಪ್ರದರ್ಶಿಸಿದ್ದು ಅವರ ಕಲಾಪ್ರತಿಭೆಗೆ ಸಾಕ್ಷಿಯಾಯಿತು.

–ಎಂ.ಜೆ. ಅಭಿಷೇಕ್, ಬೆಂಗಳೂರು

## ಅಮ್ಮ ಹೀಗೆ ಮಾಡುವುದು ಸಾಧ್ಯವೆ?

ಸಿರಿ ಕನ್ನಡದ 'ಮತ್ತೆ ಮಾಯಮೃಗ'ದಲ್ಲಿ ಪೂರ್ವಿ ಹಾಗೂ ವಾಸಂತಿ ಬೆಳಿಗ್ಗೆ ಎದ್ದು ನೋಡಿದಾಗ ಅಮ್ಮ ಮಾಳವಿಕ ಕಾಣುವುದಿಲ್ಲ. ಗಾಬರಿಯಾಗಿ ಮನೆಯೆಲ್ಲಾ ಹುಡುಕಿದಾಗ ಒಂದು ಪತ್ರ ಸಿಗುತ್ತದೆ. ಅದರಲ್ಲಿ 'ರಾತ್ರಿ ಫ್ರಾನ್ಸ್‌ನಿಂದ ನಮ್ಮ ಲಾಯರ್ ಫೋನ್ ಮಾಡಿ ಅರ್ಜೆಂಟ್ ಆಗಿ ಬನ್ನಿ. ಟಿಕೆಟ್ ಇ–ಮೇಲ್‌ನಲ್ಲಿ ಕಳುಹಿಸಿದ್ದೀನಿ ಎಂದರು. ನೀವಿಬ್ಬರೂ ನಿದ್ದೆ ಮಾಡುತ್ತಿದ್ದರಿಂದ ನಿಮಗೆ ತಿಳಿಸದೆ ಹೊರಟಿದ್ದೇನೆ' ಎಂದಿರುತ್ತದೆ. ಬೇರೆ ದೇಶಕ್ಕೆ ಹೋಗುತ್ತಿರುವಾಗಲೂ ಮಕ್ಕಳಿಗೆ ತಿಳಿಸದೇ ಹೋಗುವುದು ಸ್ವಾಭಾವಿಕವಾಗಿ ಎಲ್ಲೂ ನಡೆಯುವ ಸಂಗತಿ ಅಲ್ಲ.

–ಭಾರತೀ ಗಂಗಾಧರ್, ಬೆಂಗಳೂರು

'ಮತ್ತೆ ಮಾಯಾಮೃಗ'ದಲ್ಲಿ ಮುಗ್ಧತೆಗೆ ಕಮಲಮ್ಮ ಹೆಸರುವಾಸಿ. ನಯವಂಚನೆಗೆ ಸತ್ಯಮೂರ್ತಿ, ಪ್ರೀತಿ ಪ್ರೇಮದ ದ್ಯೋತಕವಾಗಿ ಶಾಮ ಮತ್ತು ಶ್ರೀಲಕ್ಷ್ಮಿ, ಸೇವಾಮಯಿ ಮಂಜಪ್ಪ, ಪೊಲೀಸ್ ಆದರೂ ನಯ ನಾಜೂಕಿನ ವಾಸಂತಿ. ಮಗಳ ವರ್ತನೆಯಿಂದ ಮನ ನೊಂದ ಮಾಳವಿಕಾ, ಹಿತಚಿಂತಕ ಪೊಲೀಸ್ ಅಧಿಕಾರಿ ಶಾಂತಕುಮಾರ್ ಪಾತ್ರಗಳು ನೈಜವಾಗಿ ಚಿತ್ರಿತವಾಗಿವೆ.

–ಕೆ.ಎಚ್. ತೇಜೇಶ್ಚಂದ್ರ, ತುಮಕೂರು

## ಸೂತ್ರ ತಪ್ಪಿದ 'ಜೊತೆ ಜೊತೆಯಲಿ'

ಝೀ ಕನ್ನಡದ 'ಜೊತೆ ಜೊತೆಯಲಿ' ನೋಡಿ ತಲೆಚಿಟ್ಟು ಹಿಡಿಯುತ್ತಿದೆ. ನಿರ್ದೇಶಕ ಮತ್ತು ನಾಯಕ ನಟರ ನಡುವಿನ ಶೀತಲ ಸಮರ, ನಟನ ಬದಲಾವಣೆಗೆ ಕಾರಣವಾಗುತ್ತದೆ. ನಂತರ ಪರಿಸ್ಥಿತಿ ನಿಭಾಯಿಸಲು ಸಾಧ್ಯವಾಗದೆ, ಅಸಂಬದ್ಧ ಕಥಾಹಣೆಗೆ ಮಾಡುತ್ತಿದ್ದಾರೆ. ಧಾರಾವಾಹಿಯನ್ನು ವಿಚಿತ್ರವಾಗಿ ಮುಂದುವರಿಯುತ್ತಿದೆ. ಪಾತ್ರಗಳೂ ಅಸಹಜ ಸಂದರ್ಭಕ್ಕೆ ಸರಿಯಾಗಿ ಸ್ಪಂದಿಸಲಾಗದೆ ಒದ್ದಾಡುತ್ತಿವೆ.

–ಎಂ. ಕುಮಾರಸ್ವಾಮಿ, ಬೆಂಗಳೂರು

## ಮಸಾಲೆ ಮರೆತ ನಳಪಾಕ

ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ'ದ ನಳಪಾಕ ಭಾಗದಲ್ಲಿ ಚಂದ್ರು ಅವರು 'ಚಮ್ಮಿಲ ಚಾವಲ್' ತಯಾರಿಸುವಾಗ – ರುಬ್ಬಿ ಇಟ್ಟುಕೊಂಡಿದ್ದ ಶುಂಠಿ, ಪುದಿನ, ಬೆಳ್ಳುಳ್ಳಿ ಮತ್ತು ಹಸಿ ಮೆಣಸಿನಕಾಯಿ ಮಿಶ್ರಣವನ್ನು ಸೇರಿಸುವುದನ್ನೇ ಮರೆತುಬಿಟ್ಟರು. ರುಚಿ ಹೇಗಿತ್ತೋ?

–ಉಷಾ ಶ್ರೀಪಾದ, ಬೆಂಗಳೂರು